ಈ) ಶಿವಮೊಗ್ಗ ಜಿಲ್ಲೆಗೆ ೧-೪-೧೯೮೬ರಿಂದ ೩೦-೬-೧೯೮೬ರ ವರೆವಿಗೆ, ಮೇವು ಸಂಗ್ರಹಣೆ ಗಾಗಿ ೧೪.೦೦ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿತ್ತು. ಅದರಲ್ಲಿ ೧೩,೦೬೮-೩೧ ರೂಪಾಯಿಗಳನ್ನು ಹೊಸನಗರ ತಾಲ್ಲೂಕಿನಲ್ಲಿ ಮೇವು ಕಟಾವು ಮತ್ತು ಸಾಗಾಣಿಕೆಗೆ ಖರ್ಚು ಆಗಿದೆ.

ಶ್ರೀ ಬಿ. ಸ್ವಾಮಿರಾವ್.—ಅಧ್ಯಕ್ಷರೇ, ಹೊಸನಗರ ತಾಲ್ಲೂಕಿನಲ್ಲಿ ಮೇವು ಸಂಗ್ರಹಿಸುವ ವಿವರವನ್ನು ಹೇಳಿದ್ದಾರೆ. ಆದರೆ ಯಾರು ಯಾರಿಂದ ಎಷ್ಟೆಷ್ಟು ಮೇವನ್ನು ಸಂಗ್ರಹಿಸಲಾಯಿತು. ರೈತರಿಂದ ಎಷ್ಟು ಹುಲ್ಲು ಬಂತು, ಕಾಡಿನಿಂದ ಎಷ್ಟು ಹುಲ್ಲು ಬಂತು, ಅರಣ್ಯ ಇಲಾಖೆಯಿಂದ ಎಷ್ಟು ಮೇವು ಬಂತು, ತೋಟಗಾರಿಕೆ ಇಲಾಖೆಯಿಂದ ಎಷ್ಟು ಮೇವು ಬಂತು ಎಂದು ಕೇಳುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ರೆವಿನ್ಯೂ ಇಲಾಖೆಯಿಂದ ಹುಲ್ಲನ್ನು ಕೊಂಡಿದ್ದು ೪೮ ಮೆಟ್ರಿಕ್‌ಟನ್, ಉಚಿತವಾಗಿ ರೈತರಿಂದ ಪಡೆದದ್ದು ೬೪೭ ಮೆಟ್ರಿಕ್‌ಟನ್, ಅರಣ್ಯ ಇಲಾಖೆಯಿಂದ ಪಡೆದ ಹುಲ್ಲು ೨೫೫ ಮೆಟ್ರಿಕ್ ಟನ್, ಅರಣ್ಯ ಇಲಾಖೆಯವರು ಬೆಳೆಸಿದ ಆಫ್ರಿಕನ್ ಜೋಳ ೫೫ ಮೆಟ್ರಿಕ್ ಟನ್, ತೋಟಗಾರಿಕೆ ಇಲಾಖೆಯವರು ಬೆಳೆಸಿದ ಆಫ್ರಿಕನ್ ಜೋಳದ ಹುಲ್ಲು ೫೫ ಮೆಟ್ರಿಕ್ ಟನ್.

ಶ್ರೀ ಬಿ. ಸ್ವಾಮಿರಾವ್.—ಆಮೇಲೆ ಕೋಲಾರಕ್ಕೆ ಕಳುಹಿಸಿದ್ದು ೨೬ ಮೆಟ್ರಿಕ್‌ಟನ್ ಹುಲ್ಲು ಎಂದು ಹೇಳಿದರು. ಪಾವಗಡದ ರಾಮಕೃಷ್ಣಾಶ್ರಮಕ್ಕೆ ೯ ಮೆಟ್ರಿಕ್‌ಟನ್ ಹುಲ್ಲು ಕಳುಹಿಸಲಾಗಿದೆ ಎಂದು ಹೇಳಿದರು. ಇದನ್ನು ಯಾವಾಗ ಕಳುಹಿಸಲಾಯಿತು ಎಂದು ಹೇಳುವುದಕ್ಕೆ ಆಗುತ್ತದೆಯೆ ?

ಶ್ರೀ ಎಸ್.ಆರ್. ಬೊಮ್ಮಾಯಿ.—ಇದನ್ನು ೧-೪-೮೬ ರಿಂದ ೩೦-೬-೮೬ರ ವರೆಗಿನ ಅವಧಿ ಯಲ್ಲಿ ಕಳುಹಿಸಿದ್ದೇವೆ. ಈ ಪೀರಿಯಡ್‌ನಲ್ಲಿ ಕಳುಹಿಸಿದ್ದೇವೆ ಆದರೆ ಡೇಟ್ಸ್ ನನ್ನ ಹತ್ತಿರ ಇಲ್ಲ.

ಶ್ರೀ ಬಿ.ಸ್ವಾಮಿರಾವ್.—ಕೋಲಾರಕ್ಕೆ ಕಳುಹಿಸಿದ ತಾರೀಖಿನ್ನು ಬಿಟ್ಟರೆ ಈ ರಾಮಕೃಷ್ಣಾಶ್ರಮಕ್ಕೆ ಕಳುಹಿಸಲಾಗಿರುವ ೯ ಮೆಟ್ರಿಕ್‌ಟನ್ ಹುಲ್ಲನ್ನು ನಾನು ಎಲ್.ಎ. ಕೊಶ್ಚನ್ ಪಾಕಿದ ಮೇಲೆ, ಲಾರಿಯ ಮೂಲಕ ಕಳುಹಿಸಿದ್ದಾರೆ. ಲಾರಿ ನಂಬರ್ ಸಿ.ಎ.ಎ. ೪೯೮೫ ರಲ್ಲಿ, ೯ ಮೆಟ್ರಿಕ್ ಟನ್ ಹುಲ್ಲನ್ನು ಹಾಕಿ ಕಳುಹಿಸಿ, ತಮಗೆ ತಪ್ಪು ಮಾಹಿತಿ, ಸುಳ್ಳು ಮಾಹಿತಿ ಕೊಟ್ಟು ಕಳುಹಿಸಿ, ತಮಗೆ ಹಾಗೂ ಸರಕಾರಕ್ಕೆ ವಂಚನೆ ಮಾಡಿದ್ದಾರೆ. ಇದನ್ನು ತನಿಖೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಮತ್ತೆ ಈಗ ಉಳಿದಿರತಕ್ಕಂಥ ಹುಲ್ಲಿನ ಗತಿ ಏನಾಗಿದೆ ಎಂದು ತಿಳಿಯಬಯಸುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಅದೆಲ್ಲಾ ಡೀಟೇಲ್ಸ್ ಕೊಡಿ. ರಾಮಕೃಷ್ಣಾಶ್ರಮಕ್ಕೆ ಹುಲ್ಲನ್ನು ಕಳುಹಿಸಿದ್ದಾರೆ. ಆಮೇಲೆ ಕಳುಹಿಸಿದ್ದಾರೆ ಎಂದು ತಾವು ಹೇಳುತ್ತಿದ್ದೀರಿ. ಒಟ್ಟಿನಲ್ಲಿ ಕಳುಹಿಸಿದ್ದು ನಿಜ. ಈಗ ಸಂಗ್ರಹ ಮಾಡಿರುವ ಹುಲ್ಲು ನಮಗೆ ಪುನಃ ಬೇಕಾಗಿದೆ. ಹುಲ್ಲನ್ನು ಸಂಗ್ರಹ ಮಾಡಿ ಇಡಲಿಕ್ಕೆ ಹೇಳಿದ್ದೇವೆ. ಮುಳೆ ಬಾರದೇ ಇರತಕ್ಕ ಪ್ರದೇಶಕ್ಕೆ ಅದನ್ನು ಕಳುಹಿಸುವ ಅವಶ್ಯಕತೆ ಇದೆ. ಈ ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಬಿ. ಸ್ವಾಮಿರಾವ್.—ಸಂಗ್ರಹ ಮಾಡಿರತಕ್ಕ ಹುಲ್ಲನ್ನು ಸರಿಯಾದ ರೀತಿಯಿಂದ ಕೂಡಿಡದೇ ಅದೆಲ್ಲಾ ಕೊಳೆತು ಗೊಬ್ಬರವಾಗಿದೆ. ಇದರ ಬಗ್ಗೆ ನಾನು ಹಲವಾರು ಸಲ ಪತ್ರಿಕಾ ಪೇಳಿಕೆ ಕೊಟ್ಟಿದ್ದೇನೆ. ಸಂಬಂಧಪಟ್ಟವರಿಗೆ ಬರೆದಿದ್ದೇನೆ, ಹುಲ್ಲೆಲ್ಲಾ ಪೂರ್ತಿ ಕೊಳೆತು ನಾಶವಾಗಿ ಹೋಗಿದೆ. ಗೊಬ್ಬರಕ್ಕೂ ಕೂಡಾ ಅದನ್ನು ಉಪಯೋಗಿಸುವುದಕ್ಕೆ ಬರುವುದಿಲ್ಲ. ಇದನ್ನು ಯಾರ ತಲೆ ಮೇಲೆ ಹಾಕಬೇಕು ? ಏನು ಅಲ್ಲಿನ ತಹಸೀಲ್ದಾರ್ ತಲೆಯ ಮೇಲೆ ಹಾಕಬೇಕೆ ? ಇದರ ಬಗ್ಗೆ ಪ್ರಶ್ನೆ ಕೇಳಿದ್ದೇನೆ, ತಾವು ಕೂಡಾ ಚರ್ಚೆಗೆ ಅವಕಾಶ ಕೊಟ್ಟಿದ್ದೀರಿ ಎಂದು ಕೇಳಿ ನನಗೆ ಸಂತೋಷ ಆಯಿತು. ಅದಕ್ಕಾಗಿ ಅಲ್ಲಿರತಕ್ಕಂಥ ಹುಲ್ಲಿನ ಪರಿಸ್ಥಿತಿ ಏನಾಗಿದೆ ಅದನ್ನು ಉಪಯೋಗಿಸುವುದಕ್ಕೆ ಬರುತ್ತದೆಯೇ, ಬರುವುದಿಲ್ಲವೇ ಎಂಬುದನ್ನು ತಕ್ಷಣ ತಾವು ತನಿಖೆ ಮಾಡಿ ವರದಿ ತರಿಸಬೇಕು.

ಶ್ರೀ ಎಸ್.ಆರ್. ಬೊಮ್ಮಾಯಿ.—ಅದರ ಬಗ್ಗೆ ತನಿಖೆ ಮಾಡುತ್ತೇನೆ.

ಹೊನ್ನಾಳಿ ತಾಲ್ಲೂಕಿನಲ್ಲಿರುವ ಗ್ರಾಮಗಳನ್ನು ಬರಪೀಡಿತ ಗ್ರಾಮಗಳೆಂದು ಘೋಷಿಸುವುದು

೭೪ (೩೭೨) ಶ್ರೀ ಡಿ. ಜಿ. ಬಸವನಗೌಡ (ಹೊನ್ನಾಳಿ).—ಮಾನ್ಯ ಕಂದಾಯ, ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಆ) ಹೊನ್ನಾಳಿ ತಾಲ್ಲೂಕು ಕಳೆದ ವರ್ಷ ಸಂಪೂರ್ಣವಾಗಿ ಬರಗಾಲಕ್ಕೆ ತುತ್ತಾಗಿದ್ದರೂ ಸಹ ಕೆಲವು ಹಳ್ಳಿಗಳನ್ನು ಅಭಾವ ಪೀಡಿತ ಪ್ರದೇಶಗಳೆಂದು ಘೋಷಿಸದಿರಲು ಕಾರಣವೇನು ?

ಆ) ಸರ್ಕಾರದವರು ಈಗಲಾದರೂ ಇಡೀ ತಾಲ್ಲೂಕನ್ನೇ ಅಭಾವ ಪೀಡಿತ ತಾಲ್ಲೂಕೆಂದು ಘೋಷಿಸುವರೇ ?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಆ) ಹೊನ್ನಾಳಿ ತಾಲ್ಲೂಕಿನ ಒಟ್ಟು ೧೬೮ ಗ್ರಾಮಗಳಲ್ಲಿ ಬೆಳೆ ಪರಿಸ್ಥಿತಿಯನ್ನಾಧರಿಸಿ ೧೩೦ ಗ್ರಾಮಗಳನ್ನು ಅಭಾವ ಪೀಡಿತವೆಂದು ಗುರುತಿಸಲಾಗಿತ್ತು. ನಂತರ ಬೆಳೆ ಕಟಾವು ಸಮೀಕ್ಷೆ ಮಾಡಿದ ಮೇಲೂ ಕಂಡು ಬಂದ ಅಂಶವೆಂದರೆ ೮ ಆಣೆಗಿಂತ ಕಡಿಮೆ ಉತ್ಪನ್ನವಾಗಿದ್ದ ಗ್ರಾಮಗಳ ಒಟ್ಟು ಸಂಖ್ಯೆ ೧೩೧ ಆಗಿದೆ. ಹೀಗಾಗಿ ತಾಲ್ಲೂಕಿನಲ್ಲಿ ಒಟ್ಟು ೧೩೧ ಗ್ರಾಮಗಳು ಮಾತ್ರ ಬರಗಾಲ ಪೀಡಿತವೆಂದು ಗುರ್ತಿಸಲ್ಪಟ್ಟವು. ಇನ್ನುಳಿದ ಹಳ್ಳಿಗಳಲ್ಲಿ ೮ ಆಣೆಗಿಂತ ಹೆಚ್ಚು ಉತ್ಪನ್ನವಾಗಿದ್ದುದರಿಂದ, ಈ ಎಲ್ಲ ಹಳ್ಳಿಗಳನ್ನೂ ಬರಗಾಲ ಪೀಡಿತವೆಂದು ಪರಿಗಣಿಸಲಾಗಿಲ್ಲ. ಸಮೀಕ್ಷೆ ಆಧಾರದ ಮೇಲೆ ೮ ಆಣೆ ಗಿಂತ ಕಡಿಮೆ ಉತ್ಪನ್ನವಾಗಿದ್ದ ೧೩೧ ಗ್ರಾಮಗಳಿಗೆ ಸಂಬಂಧಿಸಿದಂತೆ ಭೂ ಕಂದಾಯ ಮನ್ನಾ ಪೂರ್ಣ ವಸೂಲಾತಿ ಮುಂದೂಡಿಕೆ ಅರ್ಧ ವಸೂಲಾತಿ ಮುಂದೂಡಿಕೆ ಆದೇಶವನ್ನು ನೀಡಲಾಗಿದ್ದು ವಿವರ ಈ ರೀತಿ ಇರುತ್ತದೆ.

೧. ಭೂ ಕಂದಾಯ ಪೂರ್ಣ ಮನ್ನಾ ಮಾಡಿರುವುದು — ೪೫ ಗ್ರಾಮಗಳು — ಭೂ ಕಂದಾಯ ಮೊತ್ತ ರೂ. ೪೭,೫೯–೫೦

೨. ಭೂ ಕಂದಾಯ ಪೂರ್ಣ ವಸೂಲಾತಿ ಮುಂದೂಡಿರುವುದು ... ೫೭ ಗ್ರಾಮಗಳು ರೂ. ೫೪,೭೭೬–೪೮

೩. ಭೂ ಕಂದಾಯ ಅರ್ಧ ವಸೂಲಾತಿ ಮುಂದೂಡಿರುವುದು ೪೯ ಗ್ರಾಮಗಳು ರೂ. ೫೪,೫೦೫–೧೦

ಆ) ಈ ವರ್ಷ ಮುಂಗಾರಿನಲ್ಲಿ ಮಳೆ ಪರಿಸ್ಥಿತಿಯನ್ನು ಸತತವಾಗಿ ಅವಲೋಕಿಸಲಾಗುತ್ತದೆ. ಪರಿಸ್ಥಿತಿಯು ಒಂದು ಪಕ್ಷ ಹದಗೆಟ್ಟಲ್ಲಿ ತಾಲ್ಲೂಕಿನಲ್ಲಿ ಎಷ್ಟೆಷ್ಟು ಗ್ರಾಮಗಳಲ್ಲಿ ಅಭಾವ ಪರಿಸ್ಥಿತಿಯು ಉದ್ಭವಿಸುವುದೋ ಅಂತಹ ಹಳ್ಳಿಗಳನ್ನು ಅಭಾವ ಪೀಡಿತ ಪ್ರದೇಶಗಳೆಂದು ಗುರುತಿಸಲಾಗುವುದು.

ಶ್ರೀ ಡಿ.ಜಿ. ಬಸವನಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರ ಹೇಳಿಕೆಯ ಪ್ರಕಾರ ಹೊನ್ನಾಳಿ ತಾಲ್ಲೂಕಿನ ೧೩೧ ಹಳ್ಳಿಗಳನ್ನು ಹೊರತುಪಡಿಸಿ ಉಳಿದ ಹಳ್ಳಿಗಳಲ್ಲಿ ಎಂಟು ಆಣೆಗಿಂತ ಹೆಚ್ಚು ಬೆಳೆ ಆಗಿರುವುದರಿಂದ ಅವುಗಳನ್ನು ಬರಗಾಲ ಪೀಡಿತ ಗ್ರಾಮಗಳೆಂದು ಪರಿಗಣಿಸಲಾಗಿಲ್ಲವೆಂದು ತಿಳಿದುಬರುತ್ತದೆ. ಆದರೆ ಕಂದಾಯ ಇಲಾಖೆಯವರು ಈ ವರದಿಯನ್ನು ಸರಕಾರಕ್ಕೆ ಕಳುಹಿಸಿದ್ದುದು ಕಳೆದ ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳಲ್ಲಿ. ಕಳೆದ ವರ್ಷ ಇಡೀ ತಾಲ್ಲೂಕಿನಲ್ಲಿ ಎಂಟು ಆಣೆಗಿಂತ ಕಡಿಮೆ ಫಸಲು ಆಗಿದೆ. ಕಂದಾಯ ಇಲಾಖೆಯವರು ವರದಿ ಕಳುಹಿಸಿದ ನಂತರ, ಇಡೀ ತಾಲ್ಲೂಕಿನಲ್ಲಿ ಬೆಳೆದು ನಿಂತಿದ್ದ ಬೆಳೆಯೆಲ್ಲಾ ಒಣಗಿ ಹೋಗಿ, ಇಡೀ ತಾಲ್ಲೂಕು ಬರಗಾಲ ಪೀಡಿತ ಪ್ರದೇಶವಾಯಿತು. ಕೆಲವು ಕಡೆ ಬರಗಾಲ ಪರಿಹಾರ ಕಾಮಗಾರಿಗಳನ್ನೂ ಕೈಗೊಳ್ಳಲಾಯಿತು. ಎಲ್ಲಾ ೧೬೮ ಗ್ರಾಮಗಳೂ ಸಹ ಬರಗಾಲಕ್ಕೆ ತುತ್ತಾಗಿವೆ. ಆದರೆ ವರದಿ ಸರಕಾರಕ್ಕೆ ಮುಂಚೆಯೇ ಬಂದಿದ್ದರಿಂದ, ಉಳಿದ ಗ್ರಾಮಗಳ ರೈತರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಕೊಡತಕ್ಕಂಥ ಸಾಲ ಮುಂತಾದ ಸೌಲಭ್ಯಗಳಿಂದ ವಂಚಿತರಾದರು. ಈಗ ಅವರಿಗೆ ಕಂದಾಯ ವಸೂಲಿ ಮತ್ತೊಂದು ಎಂದು ತಗಾದೆ ಮಾಡುತ್ತಿದ್ದಾರೆ. ಬರಗಾಲ ಪರಿಹಾರ ಕಾಮಗಾರಿಗಳನ್ನು ಇಡೀ ತಾಲ್ಲೂಕಿನಲ್ಲಿ ಕೈಗೊಂಡು ಇಡೀ ತಾಲ್ಲೂಕನ್ನು ಬರಗಾಲ ಪೀಡಿತ ಪ್ರದೇಶ ಎಂದು ಘೋಷಣೆ ಮಾಡಿ, ತಾಲ್ಲೂಕಿನ ಎಲ್ಲಾ ಗ್ರಾಮಗಳೂ ಸಹ ಬರಗಾಲ ಪೀಡಿತ ಗ್ರಾಮಗಳು ಎಂದು ಘೋಷಣೆ ಮಾಡಿ ಅಲ್ಲಿ ಭೂ ಕಂದಾಯವನ್ನು ಮನ್ನಾ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಇದನ್ನು ಪರಿಶೀಲನೆ ಮಾಡಿ ಆದೇಶ ಕೊಡುತ್ತೇನೆ.